
**Image:** View in bed of Gooree river looking downstream [River Gori, Almora District]. Watercolour (detail) by S James Manson, 1826. British Library: WD 543/10



nmnh

CWEH

US University of Sussex

BRITISH LIBRARY

# ಸಾಮ್ರಾಜ್ಯ ಮತ್ತು ಭಾರತದ ಪರಿಸರ ಪರಂಪರೆ

ನ್ಯಾಶನಲ್ ಮ್ಯೂಸಿಯಂ ಆಫ್ ನ್ಯಾಚುರಲ್ ಹಿಸ್ಟರಿ - ಭಾರತ ಸರ್ಕಾರ
ಯೂನಿವರ್ಸಿಟಿ ಆಫ್ ಸುಸೆಕ್ಸ್, ಯು.ಕೆ.
ಬ್ರಿಟಿಶ್ ಲೈಬ್ರರಿ ಯು.ಕೆ. ಇವರ ಸಹಭಾಗಿ ವಸ್ತು ಪ್ರದರ್ಶನ

## ಸಾಮ್ರಾಜ್ಯ ಮತ್ತು ಭಾರತದ ಪರಿಸರ ಪರಂಪರೆ



ಈ ವಸ್ತು ಪ್ರದರ್ಶನದಲ್ಲಿ ಭಾರತದಲ್ಲಿ ಆಂಗ್ಲೇಯ ಆಡಳಿತವಿದ್ದಾಗಿನ ಭಾರತೀಯ ಪರಿಸರ ಪರಂಪರೆಯ ಕುರಿತು ವಿವಿಧ ಮೂಲಗಳಿಂದ ಸಂಗ್ರಹಿತವಾದ, ಅಂದರೆ ದೃಶ್ಯ, ಚಿತ್ರ, ನಕ್ಷಾ ಲೇಖನಗಳಲ್ಲಿ ದೊರಕಿರುವ ವಿಷಯ - ವಿಚಾರಗಳನ್ನು ಆಧರಿಸಿ, ಬ್ರಿಟಿಶ್ ಗ್ರಂಥಾಲಯ ಸಂಸ್ಥೆಯು ಅಭಿವೃದ್ಧಿ ಪಡಿಸಿ, ಪ್ರಸ್ತುತಗೊಳಿಸಿರುವ ಒಂಭತ್ತು ದೃಶ್ಯ ಫಲಕಗಳಿವೆ.

ಮೊದಲನೆ ಫಲಕದಲ್ಲಿ, ಅಂದಿನ ಭಾರತ- ಇಂದಿನ ಭಾರತದ ಪರಿಸರಗಳನ್ನು ತುಲನಾತ್ಮಕವಾಗಿ ಪರಿಶೀಲಿಸಿ ದಿನಕ್ರಮೇಣ ಆದ ಬದಲಾವಣೆಗಳನ್ನು ಐತಿಹಾಸಿಕ ಕೋನದಿಂದ ವಿಶ್ಲೇಷಿಸಲಾಗಿದೆ.

ಸಸ್ಯ ಶಾಸ್ತ್ರ, ಅರಣ್ಯ ಶಾಸ್ತ್ರ ಮತ್ತು ಭೂಗರ್ಭ ಶಾಸ್ತ್ರ ವಿಷಯಗಳಲ್ಲಿ ನಡೆಸಿದ ಅನೂಹ್ಯ ಪ್ರಮಾಣದ ಸಂಶೋಧನೆ, ತತ್ಫಲವಾಗಿ ಲಭಿಸಿರುವ ಮಾಹಿತಿಗಳು ಮುಂದಿನ ದಿನಗಳಲ್ಲಿ, ಪರಿಸರದ ಅರ್ಥವನ್ನು ಹೇಗೆ ಬದಲಾಯಿಸಿವೆ, ಹಾಗೂ ಆ ಮೂಲಕ ವಸಾಹತುಶಾಹಿ ದಿನಗಳಲ್ಲಿನ ವ್ಯಾಪಾರ-ವಾಣಿಜ್ಯಗಳಲ್ಲಿ ಪ್ರಮುಖ ಪಾತ್ರ ವಹಿಸಿವೆ ಎಂಬುದನ್ನು ತಿಳಿಸಲಾಗಿದೆ.

ಆರೋಗ್ಯ ಮತ್ತು ರೋಗನಿದಾನ, ನೀರಾವರಿ, ಸಾರಿಗೆ-ಸಂಪರ್ಕ ವಲಯಗಳಲ್ಲಿ ನಡೆದ ನಿರಂತರ ಸಂಶೋಧನೆ, ಅಭಿವೃದ್ಧಿ ಚಟು-ವಟಿಕೆಗಳು ಭಾರತದ ಪರಿಸರಕ್ಕೆ ನೀಡಿದ ಪ್ರತ್ಯಕ್ಷ - ಪರೋಕ್ಷ ಲಾಭ-ನಷ್ಟಗಳನ್ನು ವಿಶದೀಕರಿಸಲಾಗಿದೆ.



ಭಾರತೀಯ ಸ್ವಶ್ಯಾತೀತ ಸಾಂಸ್ಕೃತಿಕ ಪರಂಪರೆಯು ಆಂಗ್ಲೇಯ ಆಡಳಿತದಲ್ಲಿನ ಅನೇಕ ಬದಲಾವಣೆಗಳಿಗೆ ಸಮಾನಾಂತರವಾಗಿಯೇ ಉಳಿದು ತನ್ನತನವನ್ನು ಉಳಿಸಿಕೊಂಡು ಮುಂದುವರೆದ ವಿಚಾರವಂತೂ ಅದ್ಭುತ.

ಇಂದಿರಾಗಾಂಧಿ ರಾಷ್ಟ್ರೀಯ ಮಾನವ ಸಂಗ್ರಹಾಲಯವು ಈ ನಿಟ್ಟಿನಲ್ಲಿ ಪವಿತ್ರವನ ಅಥವಾ ದೇವರ ಕಾಡು ಕುರಿತು ಭಾರತದಾದ್ಯಂತ ಸರ್ವೇಕ್ಷಣೆ ನಡೆಸಿ ಸಂಗ್ರಹಿಸಿರುವ ಛಾಯಾಚಿತ್ರಗಳ ವೈಶಿಷ್ಟ್ಯಮಯವಾದ ಸಂಗ್ರಹವೂ ಇಲ್ಲಿದೆ.



ನಂತರದಲ್ಲಿ ಭಾರತದಲ್ಲಿ ಪವನ ಶಾಸ್ತ್ರ ಅಧ್ಯಯನ ಕುರಿತು ಪ್ರೊ. ರಿಚರ್ಡ್ ಗ್ರೋವ್ ನಿರೂಪಿಸಿರುವ ಪವನಶಾಸ್ತ್ರೀಯ ನಕ್ಷೆಯೂ ಪ್ರದರ್ಶಿತವಾಗಿದೆ.

ಪಾಂಡಿಚೇರಿಯ ಫ್ರೆಂಚ್ ಇನ್ಸ್ಟಿಟ್ಯೂಟ್ ಸಂಸ್ಥೆಯು ಸಮಕಾಲೀನ ಭಾರತೀಯ ಪರಿಸರ ಕುರಿತು ಕೈಗೊಂಡಿರುವ ಸಂಶೋಧನೆಗಳು, ಸಂರಕ್ಷಣೆಯ ಕ್ರಮಗಳನ್ನು ಕುರಿತಾದ ಅರಣ್ಯ ಶಾಸ್ತ್ರೀಯ, ಸಸ್ಯಮಾದರಿಗಳ ಸಂಗ್ರಹಣೆ, ಪರಾಗಶಾಸ್ತ್ರೀಯ ಸಂಶೋಧನೆಗಳನ್ನು ತಿಳಿಸುವ ದೃಶ್ಯ ಫಲಕಗಳೂ ಇವೆ.

ಈ ಪ್ರದರ್ಶನವನ್ನು ಬ್ರಿಟಿಶ್ ಲೈಬ್ರರಿ, ಸೆಂಟರ್ ಫಾರ್ ವರ್ಲ್ಡ್ ಎನ್ವಿರಾನ್ಮೆಂಟ್ ಹಿಸ್ಟರಿ ಯು.ಕೆ., ನ್ಯಾಶನಲ್ ಮ್ಯೂಸಿಯಂ ಆಫ್ ನ್ಯಾಚುರಲ್ ಹಿಸ್ಟರಿ, ಭಾರತ ಸರ್ಕಾರ. ಇವರ ಸಹಯೋಗದಿಂದ ಏರ್ಪಡಿಸಲಾಗಿದೆ.

